# ಯಜ್ಞೋಪವೀತ

ಶೋ.ಪ. ರಾಮಾನುಜನ್

ವರ್ಣಾಶ್ರಮಧರ್ಮಗಳ ಬಗ್ಗೆ ವಿಶದವಾಗಿ ತಿಳಿಯಲು ನಾವು ನಿತ್ಯಜೀವನದಲ್ಲಿ ಮಾಡಬೇಕಾದ ಶಾಸ್ತ್ರೀಯವಾದ ಕೆಲಸಗಳನ್ನು ತಿಳಿಯುವುದು ಅತ್ಯಾವಶ್ಯಕ.

ಬ್ರಾಹ್ಮಣರೆಲ್ಲರಿಗೂ ಷಟ್ಕರ್ಮಗಳು (ಆರು ಕೆಲಸಗಳು) ವಿಹಿತವಾಗಿವೆ. ಅವು 'ಅಧ್ಯಾಪನಂ ಅಧ್ಯಯನಂ ಯಜನಂ ಯಾಜನಂ ತಥಾ । ದಾನಂ ಪ್ರತಿಗ್ರಹಂ ಚೈವ ಬ್ರಾಹ್ಮಣಾನಾಮಕಲ್ಪಯತ್ ॥' ಎಂದು ಮನುಸ್ಮೃತಿಯಲ್ಲಿ ಹೇಳಲ್ಪಟ್ಟಿವೆ. ಅಂದರೆ ಬ್ರಾಹ್ಮಣನಾದವನು ತಾನು ಸ್ವತಃ ವೇದಾಧ್ಯಯನವನ್ನು ಮಾಡಿ, ಯಾಗಾದಿ ವೇದೋಕ್ತವಾದ ಕರ್ಮಗಳನ್ನು ಆಚರಿಸಿ, ದಾನ ಧರ್ಮಾದಿಗಳನ್ನು ಅನುಷ್ಠಿಸಬೇಕು ಮತ್ತು ಇತರರಿಗೆ ವೇದವನ್ನು ಹೇಳಿಕೊಟ್ಟು, ಅವರಿಗೆ ಯಾಗಾದಿ-ಗಳನ್ನು ಮಾಡಿಸಿ ಹಾಗೂ ಇತರರಿಂದ (ಅಧಿಕಾರಿಗಳಾದ ಕರ್ತೃಗಳಿಂದ) ದಾನವನ್ನು ತೆಗೆದುಕೊಂಡು ಇರುವವ ಷಟ್ಕರ್ಮನಿರತನೆನ್ನಿಸಿಕೊಳ್ಳುತ್ತಾನೆ. ಈ ರೀತಿಯ ಶಾಸ್ತ್ರೀಯ ಕಾರ್ಯಗಳಿಗೆ ಅರ್ಹತೆ ಉಂಟಾಗುವುದು ಉಪನಯನವೆಂಬ ವೈದಿಕವಾದ ಕಾರ್ಯದಿಂದ ಎಂದು ಪ್ರಮಾಣಗಳು ಹೇಳುತ್ತವೆ. ಈ ಉಪನಯನದ ಪ್ರಧಾನವಾದ ಅಂಗವೆಂದರೆ ಯಜ್ಞೋಪವೀತ (ಜನಿವಾರ) ಧಾರಣ. ಈ ಜನಿವಾರ(ಯಜ್ಞೋಪವೀತ)ದ ಬಗ್ಗೆ ಈ ಲೇಖನದಲ್ಲಿ ಹೇಳಲಾಗುತ್ತದೆ.

ಈ ಯಜ್ಞೋಪವೀತವೆಂಬುದು ಹತ್ತಿಯ ನೂಲಿನಿಂದ ಮಾಡಲ್ಪಟ್ಟಿರುವ ಮೂರು ಎಳೆಗಳುಳ್ಳ ಒಂದು ದಾರದ ರೂಪದಲ್ಲಿದೆ. ಇದನ್ನು ಧರಿಸುವುದಕ್ಕೆ ಕಾರಣವೇನು? ಇದರ ಮಹಿಮೆ ಏನು? ಇತ್ಯಾದಿಯಾದ ಪ್ರಶ್ನೆಗಳಿಗೆ ವೇದವು ಒಂದು ವೃತ್ತಾಂತದ ಮೂಲಕ ಉತ್ತರ ಕೊಟ್ಟಿದೆ. (ತೈತ್ತಿರೀಯಾರಣ್ಯಕದ ಎರಡನೆಯ ಅಧ್ಯಾಯಕ್ಕೆ ಸ್ವಾಧ್ಯಾಯ ಬ್ರಾಹ್ಮಣ ಎಂದು ಹೆಸರು. ಈ ಭಾಗದಲ್ಲಿ ನಿತ್ಯಕರ್ಮಾನುಷ್ಠಾನದ ಬಗ್ಗೆ (ಅಂದರೆ ಪ್ರತಿನಿತ್ಯ ಮಾಡಬೇಕಾದ ಶಾಸ್ತ್ರೀಯವಾದ ಕಾರ್ಯಗಳ ಬಗ್ಗೆ ವಿಶದವಾಗಿ ಹೇಳಲಾಗಿದೆ. ಈ ಲೇಖನಸರಣಿಯಲ್ಲಿಯೂ ಈ ಕ್ರಮದಲ್ಲೇ ವಿಷಯಗಳನ್ನು ತಿಳಿಸಲಾಗುತ್ತದೆ.)

ಹಿಂದಿನ ಕಾಲದಲ್ಲಿ ದೇವತೆಗಳೂ ಅಸುರರೂ ಜಗತ್ತಿಗೆ ಈಶ್ವರತ್ವವನ್ನು ಪಡೆಯಲು ಕಾರಣವಾದ ಸ್ವರ್ಗವನ್ನು ತಾವೇ ಪಡೆಯಬೇಕೆಂಬ ಕುತೂಹಲದಿಂದ ಒಂದೊಂದು ಯಾಗವನ್ನು ಮಾಡಲು ಆರಂಭಿಸಿದರು. ಆಗ ದೇವಾಸುರರು ಒಂದೇ ಕಾಲದಲ್ಲಿಯೇ ಪ್ರಾರಂಭಿಸಿದರೂ, ರಾಕ್ಷಸರು ತಾವು ಭುಜಬಲದಿಂದಲೇ ಸ್ವರ್ಗವನ್ನು ಪಡೆಯಬಹುದೆಂದು ಭಾವಿಸಿ, ಯಾಗಕ್ಕೆ ಮುಂಚಿತವಾಗಿ ಆಚರಿಸಬೇಕಾದ ವ್ರತನಿಯಮಾದಿಗಳನ್ನು ಯಾವುದನ್ನೂ ಆಚರಿಸದೆ ಯಾಗ ಮಾಡಿದಾಗ ಅವರಿಗೆ ಸ್ವರ್ಗಲೋಕವು ಗೋಚರವಾಗಲಿಲ್ಲ. ಅವರಿಗೆ ಮುಂದೆ ಮಾಡಬೇಕಾದುದೇನೆಂದೂ ತೋಚದೆ ಅವರು ಸೋತು ನಿರಾಶರಾಗಿ ತಿರುಗಿದರು. ದೇವತೆಗಳು ಯಾಗ ಮಾಡುವುದಕ್ಕೆ ಮುನ್ನ ಉಪನಯನ ಮುಂತಾದ ಕಾರ್ಯಗಳನ್ನೂ, ಬ್ರಹ್ಮಚರ್ಯ ಮುಂತಾದ ವ್ರತಗಳನ್ನೂ ಆಚರಿಸಿ, ನಂತರ ಯಾಗವನ್ನು ಅನುಷ್ಠಿಸಿದರು. ಅದರಿಂದ ಅವರು ಸ್ವರ್ಗ-ಲೋಕವನ್ನು ಪಡೆದರು. ಅವರು ಮಾಡಿದ ಯಜ್ಞವು, 'ಪ್ರಸೃತ' ಅಂದರೆ ಚೆನ್ನಾಗಿ ನಡೆಸಲ್ಪಟ್ಟದ್ದಾಯಿತು. ರಾಕ್ಷಸರ ಯಜ್ಞವು 'ಅಪ್ರಸೃತ'ವಾಯಿತು, ಅಂದರೆ ಅಂಗವಿಹೀನವಾಗಿ ನಿಷ್ಫಲವಾಯಿತು. ಹೀಗೆ ವೃತ್ತಾಂತವನ್ನು ಹೇಳಿ ವೇದವು, ಯಜ್ಞವು ಚೆನ್ನಾಗಿ ಮಾಡಲ್ಪಡಬೇಕಾದರೆ ('ಪ್ರಸೃತ'ವಾಗಬೇಕಾದರೆ) ಯಜ್ಞೋಪವೀತಧಾರಣಪೂರ್ವಕವಾಗಿಯೇ ಆಗಬೇಕೆಂದು ತಿಳಿಸಿದೆ. ಈಗ ಯಾಗಾದಿಗಳನ್ನು ಮಾಡಲು ಅಶಕ್ತರಾಗಿರುವ ನಮಗೆ ಏನು ಗತಿ ಎಂದರೆ, ಈ ಯಜ್ಞೋಪವೀತವನ್ನು ಧರಿಸಿಕೊಂಡು ಬ್ರಾಹ್ಮಣನು ಯಾವ ಶಾಸ್ತ್ರೀಯವಾದ ಕಾರ್ಯವನ್ನು ಮಾಡಿದರೂ ಯಾಗವನ್ನು ಮಾಡಿದ ಹಾಗಾಗುತ್ತದೆ ಎಂದಿದೆ.

'.... ಯತ್ಕಿಂಚ ಬ್ರಾಹ್ಮಣೋ ಯಜ್ಞೋಪವೀತ್ಯಧೀತೇ ಯಜತ ಏವ ತತ್; ತಸ್ಮಾದ್ಯಜ್ಞೋಪವೀತ್ಯೇವಾಧೀಯೀತ ಯಾಜಯೇದ್ಯಜೇತ ವಾ ....' ಎಂಬುದು ವೇದವಾಕ್ಯ. ಇಲ್ಲಿ ಕೆಳಗೆ ಹೇಳಿದ ಷಟ್ಕರ್ಮಗಳನ್ನೂ ಯಜ್ಞೋಪವೀತದಿಂದಲೇ ಮಾಡಬೇಕೆಂದು ಸ್ಪಷ್ಟವಾಗಿ ಹೇಳಲಾಗಿದೆ.

ಈ ರೀತಿಯ ಜನಿವಾರದ ಬಗ್ಗೆ ಮತ್ತೂ ಕೆಲವು ವಿಷಯಗಳನ್ನು ವಿವರವಾಗಿ ತಿಳಿಯಬೇಕು. ಈ ಸೂತ್ರದಲ್ಲಿ (ಸೂತ್ರ-ವೆಂಬುದು ದಾರಕ್ಕೆ ಹೆಸರು) ವೇದಮಂತ್ರಗಳಿಂದ ಕೆಲವು ದೇವತೆಗಳನ್ನು ಆವಾಹನೆ ಮಾಡಲಾಗುತ್ತದೆ. ಹಾಗೂ ಇದನ್ನು ವೇದೋಕ್ತವಾಗಿ ಪ್ರತಿಷ್ಠೆ ಮಾಡಲಾಗುತ್ತದೆ. ಅಂದರೆ ಈ ಜನಿವಾರವು ಬರೀ ದಾರವಲ್ಲ; ಇದನ್ನು ನಿರ್ಮಾಣ ಮಾಡು-

ವುದಕ್ಕೆ ವಿಹಿತವಾದ ಕ್ರಮವಿದೆ. ಈ ಕ್ರಮದಲ್ಲಿ ಮಾಡಲ್ಪಟ್ಟರೆ ಮಾತ್ರವೇ ಈ ಜನಿವಾರಕ್ಕೆ ಮಹಿಮೆ ಉಂಟಾಗುತ್ತದೆ. ಹಾಗಿಲ್ಲದಿದ್ದರೆ ಈ ದಾರವೂ ಸಹ ಹಸುವಿಗೆ ಕಟ್ಟುವ ಮೂಗುದಾರದ ಹಾಗಾಗುತ್ತದೆ ಎಂದು ವೇದವ್ಯಾಸರು ಹೇಳಿದ್ದಾರೆ. ಇದನ್ನು ಧರಿಸುವ ಕ್ರಮ ಹಾಗೂ ಇದರ ಉಪಯೋಗವನ್ನು ಮುಂದೆ ವಿವರಿಸಲಾಗಿದೆ.

ಶುಚಿಯಾದ ಜಾಗದಲ್ಲಿ ಬೆಳೆದ ಹತ್ತಿಗಿಡದಿಂದ ಹತ್ತಿಯನ್ನು ತೆಗೆದು, ದಿನಶುದ್ಧಿಯುಳ್ಳ ದಿವಸಗಳಲ್ಲಿ [ಅಂದರೆ ವೇದಾಧ್ಯಯನಕ್ಕೆ ಯೋಗ್ಯವಾದ ದಿನಗಳಲ್ಲಿ ಮಾತ್ರ ಯಜ್ಞೋಪವೀತವನ್ನು ಮಾಡಬೇಕು - ಅವು ಪ್ರತಿಪಕ್ಷದಲ್ಲಿಯೂ ಪಾಡ್ಯ, ಅಷ್ಟಮೀ, ಚತುರ್ದಶೀ, ಅಮಾವಾಸ್ಯೆ ಅಥವಾ ಪೌರ್ಣಮಿ - ಈ ತಿಥಿಗಳನ್ನು ಬಿಟ್ಟು ಹಾಗೂ ಮಂಗಳವಾರ, ಶನಿವಾರಗಳನ್ನು ಬಿಟ್ಟು] ಉಳಿದ ದಿವಸಗಳಲ್ಲಿ ಊಟ ಮಾಡುವುದಕ್ಕೆ ಮುಂಚಿತವಾಗಿಯೇ ಮಾಡತಕ್ಕದ್ದು. ಕೈಕಾಲುಗಳನ್ನು ತೊಳೆದು ಕೊಂಡು ಎರಡು ಬಾರಿ ಆಚಮನ ಮಾಡಿ ಪೂರ್ವ ಅಥವಾ ಉತ್ತರಕ್ಕೆ ಅಭಿಮುಖವಾಗಿ ಆಸನದಲ್ಲಿ ಕುಳಿತುಕೊಂಡು, ಹತ್ತಿಯಿಂದ ನೂಲನ್ನು ತೆಗೆದು ಅದನ್ನು ವೇದಮಂತ್ರಗಳಿಂದ ಸ್ಪರ್ಶಮಾಡಿ, ನಾಲ್ಕು ಬೆರಳುಗಳ ಸಂಖ್ಯೆಯಿಂದ ೯೬ ಬಾರಿ ಆಗುವಷ್ಟು ನೂಲನ್ನು ಮೂರು ಮಡಿಕೆಯಿರುವಂತೆ ಮಡಿಸಿ ಆ ದಾರವನ್ನು ಒಂದು ಪೂರ್ಣಕುಂಭದಲ್ಲಿ ಒಂದು ದರ್ಭದಿಂದ ಮಾಡಿದ ಕೂರ್ಚದ ಮೇಲಿಟ್ಟು ಪುಣ್ಯಾಹವಾಚನ ಮಂತ್ರಗಳಿಂದ ಪ್ರೋಕ್ಷಿಸಿ, ಮೂವರು ಬ್ರಾಹ್ಮಣರ ಸಹಾಯದಿಂದ ಅದನ್ನು ತಿರುಗಿಸಿ, (ಇಬ್ಬರು ಎರಡು ಕೊನೆಗಳನ್ನು ಹಿಡಿದು ಕೊಂಡು ತಿರುಗಿಸುವುದು, ಒಬ್ಬರು ಮಧ್ಯದಲ್ಲಿ ಹಿಡಿದುಕೊಳ್ಳುವುದು) ಗಾಯತ್ರೀ ಮಂತ್ರದಿಂದ ಮತ್ತೊಮ್ಮೆ ಮೂರು ಭಾಗವಾಗಿ ಮಡಿಸಿ, ಒಂದು ಗ್ರಂಥಿಯನ್ನು ಹಾಕಿ (ಗಂಟನ್ನು ಹಾಕಿ) ಮತ್ತೆ ತಿರುಗಿಸಿ, ಕೆಲವು ವೇದಮಂತ್ರಗಳನ್ನು ಅದರಲ್ಲಿ ಜಪಿಸಿ, ಈ ದಾರವನ್ನು ಮೂರು ಎಳೆಗಳಾಗಿ ಮಡಿಸಿಕೊಂಡು ಪ್ರಾಣಾಯಾಮ, ವೇದಮಂತ್ರ ಪೂರ್ವಕವಾಗಿ ಬ್ರಹ್ಮಗಂಟನ್ನು ಹಾಕಬೇಕು.

ಈ ರೀತಿ ಮಾಡಲ್ಪಟ್ಟ ಜನಿವಾರವನ್ನು ಒಂದು ಜಲಕುಂಭದ ಮೇಲೆ ಕೂರ್ಚ, ಮಾವಿನ ಸೊಪ್ಪಿನೊಡನೆ ಇಟ್ಟು ಯಜ್ಞೋಪವೀತ ಪ್ರತಿಷ್ಠೆ ಮಾಡುವುದಾಗಿ ಸಂಕಲ್ಪ ಮಾಡಿಕೊಂಡು ಅದರಲ್ಲಿ ಪೃಥಿವೀ, ಆಪಃ, ಅಗ್ನಿ, ವಾಯು, ಆಕಾಶ, ಪ್ರಾಣ, ಆತ್ಮ, ಅಂತರಾತ್ಮ, ಪರಮಾತ್ಮ ಎಂಬ ಒಂಬತ್ತು ದೇವತೆಗಳನ್ನೂ (ಇವುಗಳಿಗೆ ನವತಂತು ದೇವತೆಗಳೆಂದು ಹೆಸರು) ಬ್ರಹ್ಮ, ವಿಷ್ಣು, ರುದ್ರ ಎಂಬ ಮೂರು ದೇವತೆಗಳನ್ನೂ (ಇವರಿಗೆ ಗ್ರಂಥಿತ್ರಯ ದೇವತೆಗಳೆಂದು ಹೆಸರು) ಹಾಗೂ ಯಜ್ಞೋಪವೀತಕ್ಕೆ ಅಧಿದೇವತೆಯಾದ ಶ್ರೀಮನ್ನಾರಾಯಣನನ್ನೂ ಆವಾಹನೆ ಮಾಡಿ ಉಪಚಾರಗಳನ್ನು ಸಮರ್ಪಿಸಿ 'ಆ ಸತ್ಯೇನ' ಎಂಬ ಮಂತ್ರದಿಂದ ಸೂರ್ಯನಿಗೆ ತೋರಿಸಿ, ಮತ್ತೇ ಈ ಯಜ್ಞೋಪವೀತವನ್ನು ಸ್ಪರ್ಶಿಸಿಕೊಂಡು ೧೦೮ ಬಾರಿ ಗಾಯತ್ರಿ ಮಂತ್ರವನ್ನು ಜಪಿಸಬೇಕು. ನಂತರ ಪೂಜೆ ಮಾಡುವ ಕಾಲದಲ್ಲಿ ದೇವರಿಗೆ ಸಮರ್ಪಿಸಿ ಆಮೇಲೆ ಈ ಸೂತ್ರವನ್ನು ಧರಿಸಬೇಕು. ಇದನ್ನು ಧರಿಸುವುದಕ್ಕೂ ಸಹ ಆಚಮನ, ಪ್ರಾಣಾಯಾಮ, ಸಂಕಲ್ಪಗಳನ್ನು ಮಾಡಿಕೊಂಡು ಮಂತ್ರ, ಋಷಿ, ಛಂದಸ್, ದೇವತೆ, ವಿನಿಯೋಗಗಳೊಡನೆ ಯಥೋಕ್ತವಾಗಿ ಮಾಡಬೇಕು. ಈ ರೀತಿಯ ಯಜ್ಞೋಪವೀತಕ್ಕೆ ಶಾಸ್ತ್ರೋಕ್ತ-ವಾದ ಮಹಿಮೆ ಇದೆ ಎಂಬುದು ವೇದದ ಆಶಯ.

ಯಜ್ಞೋಪವೀತಮಂತ್ರದಲ್ಲಿಯೂ ಸಹ, ಪರಮಪವಿತ್ರವಾದ ಹಾಗೂ ಚತುರ್ಮುಖ ಬ್ರಹ್ಮನ ಜೊತೆಯಲ್ಲಿ ಹುಟ್ಟಿದ ಮತ್ತು ಆಯಸ್ಸು, ಬಲ, ಶಕ್ತಿ, ಕಾಂತಿ ಮುಂತಾದವುಗಳ ವರ್ಧಕವಾದ ಯಜ್ಞೋಪವೀತದ ಮಾಹಾತ್ಮ್ಯದ ಪರಿಚಯ-ವಾಗುತ್ತದೆ. ಉಪವೀತ, ಬ್ರಹ್ಮಸೂತ್ರ, ಸೂತ್ರ, ಯಜ್ಞೋಪವೀತ, ಯಜ್ಞಸೂತ್ರ, ದೇವಲಕ್ಷ್ಮ ಇವೆಲ್ಲ ಜನಿವಾರದ ಇತರ ಹೆಸರುಗಳು.

ಈ ಯಜ್ಞೋಪವೀತವನ್ನು ಬ್ರಹ್ಮಚಾರಿಗಳು ಒಂದು, ಗೃಹಸ್ಥರು ಹಾಗೂ ವಾನಪ್ರಸ್ಥರು ಎರಡು ಹಾಗೂ ಸನ್ಯಾಸಿಗಳು ಒಂದು ಎಂಬ ಕ್ರಮದಲ್ಲಿ ಧರಿಸಬೇಕು. ಗೃಹಸ್ಥರು ಕೆಲವು ವಿಶೇಷ ಸಂದರ್ಭಗಳಲ್ಲಿ ಹೆಚ್ಚು ಯಜ್ಞೋಪವೀತವನ್ನು ಧರಿಸಬಹುದು.

ಈ ಜನಿವಾರವನ್ನು ಹಾಕಿಕೊಳ್ಳುವುದರಲ್ಲಿಯೂ ಮೂರು ಬಗೆಯುಂಟು. ಉಪವೀತ ಎಂಬುದು (ಸಾಧಾರಣವಾಗಿ ಎಲ್ಲರೂ ಹಾಕಿಕೊಳ್ಳುವ ಹಾಗೆ) ಅಂದರೆ ಬಲಗೈಯನ್ನು ಮೇಲಕ್ಕೆತ್ತಿ, ತಲೆಯ ಮೇಲಿಂದ ಜನಿವಾರವನ್ನು ಎಡತೋಳಿನ ಮೇಲೆ ಹಾಕಿಕೊಳ್ಳುವುದು. (ಎಡತೋಳು, ಹೊಟ್ಟೆಯ ಬಲಭಾಗದಲ್ಲಿ ಇರುವುದು) ವಿಪರೀತ, ಅಂದರೆ, ಬಲತೋಳಿನ ಮೇಲೆ ಎಡಗೈಯನ್ನು ಎತ್ತಿ ತಲೆಯ ಮೇಲಿಂದ ಹಾಕಿಕೊಳ್ಳುವುದಕ್ಕೆ ಪ್ರಾಚೀನಾವೀತ ಎಂದು ಹೆಸರು. ಜನಿವಾರವನ್ನು ಹಾರದ ಹಾಗೆ ಕೊರಳ ಮೇಲೆ ಹಾಕಿಕೊಳ್ಳುವುದು (ಅಂದರೆ ಎರಡು ಕೈಗಳೂ ಜನಿವಾರದಿಂದ ಹೊರಗಡೆ ಇರುವುದು) ನಿವೀತ ಎನ್ನಲಾಗುತ್ತದೆ. ಈ ಮೂರು ವಿಧಗಳಲ್ಲಿ ದೇವತೆಗಳ ಕಾರ್ಯದಲ್ಲಿ ಉಪವೀತವಾಗಿ ಧರಿಸಬೇಕು. ಉದಾ - ಸಂಧ್ಯಾವಂದನ, ದೇವಪೂಜೆ, ಭೋಜನ, ವೇದಾಧ್ಯಯನ ಮುಂತಾದ ಸಮಯಗಳಲ್ಲಿ. ಋಷಿತರ್ಪಣ ಮುಂತಾದ ಋಷಿ

ಕಾರ್ಯಗಳಲ್ಲಿ ಮತ್ತು ಇತರ ಮಾನುಷವಾದ ಕಾರ್ಯಗಳಲ್ಲಿ ನಿವೀತವಾಗಿಯೂ, ಪಿತೃಕಾರ್ಯಗಳಲ್ಲಿ (ಪಿತೃತರ್ಪಣ, ಶ್ರಾದ್ಧ ಮುಂತಾದ ಕಾರ್ಯಗಳಲ್ಲಿ ಪ್ರಾಚೀನಾವೀತವಾಗಿಯೂ ಧರಿಸಬೇಕು. ಇದನ್ನು ವೇದವು 'ನಿವೀತಂ ಮನುಷ್ಯಾಣಾಂ ಪ್ರಾಚೀನಾವೀತಂ ಪಿತೃಣಾಂ ಉಪವೀತಂ ದೇವಾನಾಂ ಉಪವ್ಯಯತೇ....' ಎಂದು ಹೇಳುತ್ತದೆ).

ಈ ಯಜ್ಞೋಪವೀತವಿಲ್ಲದೆ ಒಂದು ಕ್ಷಣವೂ ಇರಬಾರದು ಹಾಗೂ ಮಲಮೂತ್ರ-ವಿಸರ್ಜನೆ ಮಾಡುವ ಕಾಲಗಳಲ್ಲಿ ನಿವೀತ ಮಾಡಿಕೊಳ್ಳಬೇಕು. ಇದನ್ನು ನಾಭಿಗೆ ಬರುವಷ್ಟು ಉದ್ದವಾಗಿಯೇ ಧರಿಸಬೇಕು. ಉಪಾಕರ್ಮ ಮುಂತಾದ ಕಾಲಗಳಲ್ಲಿ ಮತ್ತು ವಿಶೇಷ ಶಾಸ್ತ್ರೀಯ ಕಾರ್ಯಗಳಲ್ಲಿಯೂ, ಹೊಸ ಯಜ್ಞೋಪವೀತವನ್ನು ಧರಿಸಬೇಕು. ಈ ಸೂತ್ರ ಜೀರ್ಣವಾಗಿ ಹೋದಾಗ ಇದನ್ನು ತ್ಯಜಿಸಿ ಹೊಸ ಜನಿವಾರವನ್ನು ಹಾಕಿಕೊಳ್ಳಬೇಕು. ಉಪನಯನದ ಪ್ರಧಾನವಾದ ಅಂಗವಾದ ಈ ಯಜ್ಞೋಪವೀತವನ್ನು ಹೀಗೆ ಚೆನ್ನಾಗಿ ತಿಳಿದು ಧರಿಸಿದ ನಂತರ ಇತರ ಕರ್ಮಾನುಷ್ಠಾನಕ್ಕೆ (ಕಾರ್ಯಗಳನ್ನು ಮಾಡುವುದಕ್ಕೆ) ಯೋಗ್ಯತೆ ಉಂಟಾಗುತ್ತದೆ.